ಜೆಎಸ್‌ಎಸ್ ಮಹಾವಿದ್ಯಾಪೀಠ

# ಜೆಎಸ್‌ಎಸ್ ಮಹಿಳಾ ಕಾಲೇಜು(ಸ್ವಾಯತ್ತ)

(An Autonomous College of University of Mysore: Re - Accredited by NAAC at 'A' Grade with a CGPA of 3.07)

ಸರಸ್ವತಿಪುರಂ, ಮೈಸೂರು–570 009

**Ph No:0821-2548239 ♣ Principal 2548383 ♣ Fax: 2548240 ♣ : jsscw.principal@gmail.com ♣ Website: http://www.jsscw.in**

ದಿನಾಂಕ: 28.01.2026

**ಪ್ರಕಟಣೆಯ ಕೃಪೆಗಾಗಿ**

## "ಅಂತರಂಗವನ್ನು ಬೆಳಗಿಸುವ ಶಕ್ತಿ ಮುದ್ದುರಾಮ ಕಾವ್ಯಕ್ಕಿದೆ"

**– ಪ್ರೊ. ಎಂ. ಕೃಷ್ಣೇಗೌಡ**

ಅಂತರಂಗವನ್ನು ಬೆಳಗಿಸುವ ಶಕ್ತಿ ಮುದ್ದುರಾಮ ಕಾವ್ಯಕ್ಕಿದೆ ಎಂದು ಖ್ಯಾತ ವಾಗ್ಮಿಗಳು, ಚಿಂತಕರಾದ ಪ್ರೊ. ಎಂ. ಕೃಷ್ಣೇಗೌಡ ಅವರು ಅಭಿಪ್ರಾಯಪಟ್ಟರು.

ದಿನಾಂಕ 28. 1. 2026ರಂದು ಮೈಸೂರು ಸರಸ್ವತಿಪುರಂನ ಜೆಎಸ್‌ಎಸ್ ಮಹಿಳಾ ಕಾಲೇಜಿನ ನವಜ್ಯೋತಿ ಸಭಾಂಗಣದಲ್ಲಿ ಮೈಸೂರು ಜಿಲ್ಲೆಯ ಮುದ್ದುರಾಮ ಬಳಗ ಹಾಗೂ ಕಾಲೇಜಿನ ಕನ್ನಡ ವಿಭಾಗದ ಸಂಯುಕ್ತಾಶ್ರಯದಲ್ಲಿ ಉಪನ್ಯಾಸ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. 'ಮುದ್ದುರಾಮ – ಒಂದು ಪರಿಮಳದ ಪಯಣ 'ವಿಷಯ ಕುರಿತು ವ್ಯಾಖ್ಯಾನ ಮಾಡಿದ ಪ್ರೊ. ಎಂ. ಕೃಷ್ಣೇಗೌಡ ಅವರು ಮಾತನಾಡುತ್ತಾ, ಮುದ್ದುರಾಮ ಕಾವ್ಯಕ್ಕೆ ಅಂತರಂಗವನ್ನು ಬೆಳಗಿಸುವ ಶಕ್ತಿಯಿದ್ದು, ಅರ್ಥದ ಮತ್ತು ನಾದದ ಮಾರ್ಗವನ್ನು ಅನುಭವಿಸುವಂತೆ ಪ್ರೇರೇಪಿಸುತ್ತದೆ. ನಾವು ನಮ್ಮ ಹೊರಗಿನ ಮತ್ತು ಒಳಗಿನ ಲೋಕದೊಂದಿಗೆ ಪಯಣಿಸಬೇಕಿದೆ ಎಂದರು. ಮುದ್ದುರಾಮನ ಚೌಪದಿಗಳು ದಿವ್ಯತೆಯ ದರ್ಶನವನ್ನು ನೀಡುತ್ತವೆ ಎಂದು ಅಭಿಪ್ರಾಯಪಟ್ಟರು. ಮುದ್ದುರಾಮನ ಚೌಪದಿಗಳನ್ನು ವಿದುಷಿ ಶುಭಾ ರಾಘವೇಂದ್ರ ವಾಚಿಸಿದರು.





ಮುದ್ದುರಾಮ ಬಳಗದ ಸಂಚಾಲಕರಾದ ಡಾ.ಹೆಚ್. ಬಿ ಬೆಟ್ಟಸ್ವಾಮಿ ಅವರು ತಮ್ಮ ಪ್ರಾಸ್ತಾವಿಕ ನುಡಿಯಲ್ಲಿ ಮನುಷ್ಯ ಜಗತ್ತಿನಲ್ಲಿ ಮೌಲ್ಯಗಳಿಗೆ ಶ್ರೇಷ್ಠ ಸ್ಥಾನವಿದೆ. ಮನುಷ್ಯನ ಅಂತರಂಗವನ್ನು ಬೆಳಗಿಸುವ ಸಂವಿಧಾನ ಎಂದರು. ಸರ್ವಕಾಲಕ್ಕೂ ಬೇಕಿರುವ ಜ್ಞಾನವನ್ನು ಪಸರಿಸುವ ಆಶಯವನ್ನು ಮುದ್ದುರಾಮ ಬಳಗ ಹೊಂದಿದೆ. ಮನುಷ್ಯ ಕುಲವನ್ನು ಸಂತೈಸುವ ತಾಯ್ತನದ ಶಕ್ತಿ ಮುದ್ದುರಾಮನ ಚೌಪದಿಗಳಿಗಿವೆ ಎಂದರು.

ಕಾರ್ಯಕ್ರಮದಲ್ಲಿ ಅಧ್ಯಕ್ಷತೆ ವಹಿಸಿ ಅಧ್ಯಕ್ಷೀಯ ನುಡಿಗಳನ್ನಾಡಿದ ಜೆಎಸ್‌ಎಸ್ ಮಹಾವಿದ್ಯಾಪೀಠದ ಕಾಲೇಜು ಶಿಕ್ಷಣ ವಿಭಾಗದ ನಿರ್ದೇಶಕರಾದ ಪ್ರೊ. ಮೊರಬದ ಮಲ್ಲಿಕಾರ್ಜುನ ಅವರು ಮಾತನಾಡುತ್ತಾ, ಸೃಜನಶೀಲ ಮನಸ್ಸು ಶ್ರೇಷ್ಠ ಮಟ್ಟದ ಆಲೋಚನೆಯಿಂದ ರೂಪಿತವಾಗುತ್ತದೆ. ಮುದ್ದುರಾಮನ ಚೌಪದಿಗಳು ಭಾರತೀಯ ಜ್ಞಾನ ಪರಂಪರೆಯ ಮುಂದುವರಿಕೆಯಾಗಿದ್ದು, ಪರಂಪರೆಯನ್ನು ವಿಸ್ತರಿಸುವ ಕಾರ್ಯವನ್ನು ಚೌಪದಿಗಳು ಸಾಧಿಸಿವೆ ಎಂದರು. ಬದುಕಿನಲ್ಲಿ ಸಾರ್ಥಕತೆಯನ್ನು ಸಾಧಿಸುವುದಕ್ಕೆ ಸಾಧ್ಯ ಎಂಬುದನ್ನು ಕಾವ್ಯ ತಿಳಿಸುತ್ತದೆ ಎಂದರು.

ವೇದಿಕೆಯಲ್ಲಿ ಕಾಲೇಜಿನ ಪ್ರಾಚಾರ್ಯರಾದ ಡಾ. ರೇಚಣ್ಣ ಅವರು ಉಪಸ್ಥಿತರಿದ್ದರು. ಅಧ್ಯಾಪಕರು ಮತ್ತು ಅಧ್ಯಾಪಕೇತರ ವರ್ಗದವರು ಭಾಗವಹಿಸಿದ್ದರು.

ಕು.ದಿಶಾ ಮತ್ತು ಕು. ಅನಘ ಭಟ್ ಪ್ರಾರ್ಥಿಸಿದರು. ಕು.ಸಹನಾ ಎಸ್ ಎಂ ಅಂತಿಮ ಬಿಎ ಗಣ್ಯರನ್ನು ಸ್ವಾಗತಿಸಿದರು. ಕು. ವಿನುತ ಅಂತಿಮ ಬಿಬಿಎ ವಂದಿಸಿದರು. ಕು. ಅಪರಂಜಿ ಅಂತಿಮ ಬಿಎಸ್ಸಿ ಕಾರ್ಯಕ್ರಮ ನಿರೂಪಿಸಿದರು.

ಪ್ರಾಂಶುಪಾಲರು